ಉದ್ರಿ ಮಾತ್ರ ಕೊಡ್ಬೇಡ. ಯಾವತ್ತು ಶುರು ಮಾಡ್ತೀಯೇಳು ನಾನೇ ಬೋಣಿ ಮಾಡ್ತೀನಿ.'' ಎಂದು ಎದೆಯಾಳದಿಂದ ಮಾತನಾಡಿದ್ದು ಅಕ್ಕಯ್ಯಮ್ಮನಿಗೆ ಆನಂದ ತರಿಸಿತ್ತು. ''ಹಂಗೆ ಆಗ್ಲೇಳಣ್ಣಯ್ಯ. ನಿಮ್ಮಂಥೋರ ಆಶೀರ್ವಾದ ಇದ್ರೆ ರಂಗನಾಥ ಸ್ವಾಮಿ ಒಳ್ಳೇದೆ ಮಾಡ್ತಾನೆ.'' ಎಂದು ಉತ್ತರಿಸಿ ಸಂತೆಯ ಲಗೇಜನ್ನು ಎರಡೂ ಕೈಗಳಲ್ಲಿ ಹಿಡಿದು ಹತ್ತಿರವೇ ಇದ್ದ ಬಸ್‌ಸ್ಟ್ಯಾಂಡ್ ಕಡೆ ಲಗುಬಗೆಯಿಂದ ಹೆಜ್ಜೆಗಳನ್ನು ಹಾಕಿದ್ದಳು.

ಶುಕ್ರವಾರ ನಾಲ್ಕು ಗಂಟೆಗೆಲ್ಲ ಅಕ್ಕಯ್ಯಮ್ಮ ಊರದೇವರಾದ ರಂಗನಾಥ ಸ್ವಾಮಿ ಗುಡಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬಂದು ಪೂಜಾರಪ್ಪ ಹೇಳಿದ ಟೈಮಿಗೆ ಸ್ಟೌ ಹಚ್ಚಿದ್ದಳು. ಹಿಂದಿನ ದಿನ ಸಾಯಂಕಾಲವೇ ಪಕ್ಕದ ಹನುಮಂತಪುರಕ್ಕೆ ಹೋಗಿ ಅಶ್ವತ್ಥಪ್ಪನ ಕೋಳಿಫಾರಂನಿಂದ ಮೂರೂವರೆ ರೂಪಾಯಿನಂತೆ ನೂರು ಮೊಟ್ಟೆಗಳನ್ನು ಕೊಂಡು ತಂದಿದ್ದಳು. ಸುತ್ತ ಮುತ್ತಲಿನ ಮೂರು ಹಳ್ಳಿಗಳಲ್ಲಿ ಅಶ್ವತ್ಥಪ್ಪನ ಕೋಳಿಫಾರಂ ಫೇಮಸ್ ಆಗಿತ್ತು. ಮನೆಯ ಹತ್ತಿರವೇ ಅಶ್ವತ್ಥಪ್ಪ ಐನೂರರಿಂದ ಸಾವಿರ ಕೋಳಿಗಳನ್ನು ಸಾಕುವಂಥ ಸಣ್ಣ ಕೋಳಿಫಾರಂ ಶುರುಮಾಡಿದ್ದ. ಫಾರಂ ಹತ್ತಿರ ಹೋದರೆ ಹೋಲ್ ಸೇಲ್ ಬೆಲೆಯಲ್ಲಿ ಕೋಳಿ ಮತ್ತು ಮೊಟ್ಟೆ ಎರಡನ್ನೂ ಕೊಡುತ್ತಿದ್ದ. ಕೋಳಿಫಾರಂ ಇಟ್ಟ ಮೇಲೆ ಅಶ್ವತ್ಥಪ್ಪ ದುಡ್ಡು ಕಾಸಿನ ವಿಷಯದಲ್ಲಿ ತುಂಬಾನೇ ಇಂಪ್ರೂ ಆಗಿದ್ದ. ಅಕ್ಕಯ್ಯಮ್ಮನ ವಿಷಯ ತಿಳಿದು, ಅವಳು ಯಾವಾಗ ಬಂದರೂ, ತಾನು ಇಲ್ಲದಿದ್ದರೂ ಹೋಲ್ ಸೇಲ್ ರೇಟಿನಲ್ಲಿ ಮೊಟ್ಟೆ ಕೊಡುವಂತೆ ಮಗನಿಗೂ, ಹೆಂಡತಿಗೂ ಹೇಳಿದ್ದ. ''ಹನುಮಂತಪುರದ ಮುತ್ಯಾಲಮ್ಮ ಒಳ್ಳೇದು ಮಾಡ್ಲಪ್ಪ ನಿಂಗೆ.'' ಎಂದು ಅಶ್ವತ್ಥಪ್ಪನನ್ನು ಹರಸಿ ಬಂದಿದ್ದಳು. ಮಾತು ಕೊಟ್ಟಂತೆ ಹಾಲಿನ ಡೈರಿ ಸೆಕ್ರೇಟರಿ ರಾಮದಾಸಪ್ಪ ಟೈಮಿಗೆ ಸರಿಯಾಗಿ ಹಾಜರಾಗಿ ಅಕ್ಕಯ್ಯಮ್ಮ ಹಾಕಿದ ಮೊದಲ ಬಿಸಿಬಿಸಿ ಆಮ್ಲೇಟನ್ನು ಊದಿ ಊದಿ ಬಾಯಿಗಿಟ್ಟುಕೊಂಡಿದ್ದ. ಸುಮಾರು ಹತ್ತನ್ನೆರಡು ಜನ ಸೇರಿದ್ದರು. ಆಮ್ಲೇಟನ್ನು ತಿಂದು ಮುಗಿಸಿ ನೀರು ಕುಡಿದ ರಾಮದಾಸಪ್ಪ, ''ಅಕ್ಕಯ್ಯಮ್ಮ ಆಮ್ಲೇಟ್ ಬಲೈಕ್ಲಾಸಾಗೈತಮ್ಮ. ಈರುಳ್ಳಿ, ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು ಬಲು ಹದವಾಗಿ ಹಾಕಿದ್ದೀಯ.'' ಎಂದು ಹತ್ತು ರೂಪಾಯಿ ನೋಟನ್ನು ಅಕ್ಕಯ್ಯಮ್ಮನ ಕೈಯಲ್ಲಿಟ್ಟು, ''ಒಳ್ಳೇದಾಗ್ಲೈತೇಳಮ್ಮ ಅಕ್ಕಯ್ಯಮ್ಮ'' ಎಂದು ಟವಲ್ಲಿನಿಂದ ಮೂತಿ ಒರೆಸಿಕೊಂಡು ಡೈರಿ ಕಡೆ ನಡೆದಿದ್ದ. ಊರಿನಲ್ಲಿ ದೊಡ್ಡ ಮನುಷ್ಯರೆನಿಸಿಕೊಂಡವರು ರಾಮದಾಸಪ್ಪನ ಕೂಡ ಬಂದಿದ್ದರಿಂದ ಅವರೆಲ್ಲರೂ ತಲಾ ಒಂದೊಂದು ಆಮ್ಲೇಟನ್ನು ತಿಂದು ಕಾಸುಕೊಟ್ಟು

